# ಕರ್ನಾಟಕ ಸರ್ಕಾರ
# ರೇಷ್ಮೆ ಇಲಾಖೆ

## ಮಾಹಿತಿ ಹಕ್ಕು ಅಧಿನಿಯಮ–2005
## { 4(1)(ಬಿ) ನ 2020–21 ರ ಮಾಹಿತಿಗಳು }

ದಿನಾಂಕ:27–04–2021

**4(1)(ಬಿ)(i) ಇಲಾಖೆಯ ಸಂಘಟನೆ, ಚಟುವಟಿಕೆಗಳು ಮತ್ತು ಕರ್ತವ್ಯಗಳ ವಿವರಗಳು.**

**ರೇಷ್ಮೆ ಇಲಾಖೆ ಸಂಘಟನೆ ಮತ್ತು ಇಲಾಖೆಯ ಕಾರ್ಯಚಟುವಟಿಕೆಗಳು.**

**ಸಂಘಟನೆ:–**

ರೇಷ್ಮೆ ಇಲಾಖೆಯು ರಾಜ್ಯದಲ್ಲಿ ರೇಷ್ಮೆ ಕೃಷಿ ಚಟುವಟಿಕೆಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇಲಾಖೆಯ ಆಯುಕ್ತರು ಮತ್ತು ನಿರ್ದೇಶಕರ ನೇತೃತ್ವದಲ್ಲಿ ಇಲಾಖೆಯ ವಿವಿಧ ವೃಂದದ ತಾಂತ್ರಿಕ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ರೇಷ್ಮೆ ಕೃಷಿ ಅಭಿವೃದ್ಧಿಯ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಇಲಾಖೆಯ ತಾಂತ್ರಿಕ ವಿಭಾಗ, ಆಡಳಿತ ವಿಭಾಗ ಆಯುಕ್ತರ ಮಾರ್ಗದರ್ಶನದಲ್ಲಿ ಇಲಾಖೆಯ ವಿವಿಧ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ಕ್ಷೇತ್ರಮಟ್ಟದಲ್ಲಿ ವಿವಿಧ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ವಿಸ್ತರಣಾ ಕಾರ್ಯನಿರ್ವಹಿಸುತ್ತಾರೆ ಇಲಾಖೆಯ ಸಿಬ್ಬಂದಿ ವರ್ಗಗಳ ಸಂಘಟನೆಯ ವಿವರ ತೋರಿಸುವ ತ:ಖ್ತೆಯನ್ನು ಮುಂದಿನ ಪುಟದಲ್ಲಿ ತೋರಿಸಲಾಗಿದೆ. ಇಲಾಖೆಯಲ್ಲಿ ಈಗ 4299 ಮಂಜೂರಾದ ವಿವಿಧ ವೃಂದದ ಹುದ್ದೆಗಳಿದ್ದು, 1728 ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿದ್ದಾರೆ.

**ರೇಷ್ಮೆ ಇಲಾಖೆಯ ಕರ್ತವ್ಯಗಳು ಮತ್ತು ಕಾರ್ಯ ಚಟುವಟಿಕೆಗಳು:–**

ರೇಷ್ಮೆ ಇಲಾಖೆಯು ರಾಜ್ಯದಲ್ಲಿ ರೇಷ್ಮೆ ಕೃಷಿ ಚಟುವಟಿಕೆಗಳ ಅಭಿವೃದ್ಧಿಗಾಗಿ ಕೆಳಕಂಡ ಮುಖ್ಯ ಸೇವೆಗಳನ್ನು ಒದಗಿಸುತ್ತಿದೆ.

1. ರೇಷ್ಮೆ ಕೃಷಿ ಚಟುವಟಿಕೆಗಳಾದ ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಾಣಿಕೆ, ನೂಲು ಬಿಚ್ಚಾಣಿಕೆ, ಇತ್ಯಾದಿಗಳ ಬಗ್ಗೆ ತಾಂತ್ರಿಕ ಮಾರ್ಗದರ್ಶನ ನೀಡುವುದು ಮತ್ತು ತರಬೇತಿ ಒದಗಿಸುವುದು.

2. ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುವಿನ ತಳಿಗಳನ್ನು ಅಭಿವೃದ್ಧಿ ಪಡಿಸಿ ರೈತರಿಗೆ ಒದಗಿಸುವುದು.

3. ಹಿಪ್ಪುನೇರಳೆ ಹಾಗು ರೇಷ್ಮೆ ಹುಳುವಿನ ಮೂಲ ಬಿತ್ತನೆ ನಿರ್ವಹಿಸುವುದು ಮತ್ತು ರೋಗರಹಿತ ರೇಷ್ಮೆ ಮೊಟ್ಟೆಗಳನ್ನು ರೈತರಿಗೆ ಒದಗಿಸಲು ವ್ಯವಸ್ಥೆಗಳನ್ನು ರೂಪಿಸುವುದು.

4. ರೇಷ್ಮೆ ಬೆಳೆಗಾರರಿಗೆ, ವಿಸ್ತರಣೆ, ಚಾಕಿ ಸಾಕಣೆ ಮತ್ತು ರೋಗ ನಿಯಂತ್ರಣ ಸೌಲಭ್ಯಗಳನ್ನು ಒದಗಿಸುವುದು.

5. ರೇಷ್ಮೆ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ರೈತರಿಗೆ, ಮತ್ತು ನೂಲು ಬಿಚ್ಚಾಣಿಕೆದಾರರಿಗೆ ಸಹಾಯ ಮಾಡುವುದು.

6. ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆ ಮಾರಾಟಕ್ಕೆ ಸೌಲಭ್ಯಗಳನ್ನು ಒದಗಿಸುವುದು.

7. ರೇಷ್ಮೆ ಗೂಡು ಮತ್ತು ರೇಷ್ಮೆ ನೂಲಿಗೆ ಸೂಕ್ತ ದರ ದೊರೆಯಲು ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು.

8. ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಹೊಸ ತಾಂತ್ರಿಕತೆಗಳನ್ನು ಅಳವಡಿಸಿ ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟ ಹೆಚ್ಚಿಸಿ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಪ್ರೇರೇಪಿಸುವುದು.

9. ರಾಜ್ಯದಲ್ಲಿ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವುದು.

**4(1)(ಬಿ)(ii)** ಅಧಿಕಾರಿಗಳು ಮತ್ತು ಸಿಬ್ಬಂದಿಯ ಅಧಿಕಾರ ಮತ್ತು ಕರ್ತವ್ಯಗಳು

| ಅಧಿಕಾರಿಗಳ ಮತ್ತು ಸಿಬ್ಬಂದಿಯ ಅಧಿಕಾರಗಳು ಮತ್ತು ಕರ್ತವ್ಯಗಳು | | |
|---|---|---|
| 1 | 1 | **ಅಧಿಕಾರಗಳು:** ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ 267 ಎಸ್.ಎಲ್.ಎಸ್ 79 ದಿ:1-6-1981 ರಲ್ಲಿ ಹೊರಡಿಸಿರುವ ಅಧಿಕಾರ ಪ್ರತ್ಯಾ ಯೋಜನೆ,ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2001 ದಿನಾಂಕ:2-2-2001 ರ ಆರ್ಥಿಕ ಪ್ರತ್ಯಾ ಯೋಜನೆ ಮತ್ತು ಸರ್ಕಾರದ ಆದೇಶ ಸಂಖ್ಯೆ: ವಾಕೈ 47 ರೇಕೃವಿ 94 ದಿನಾಂಕ:17-10-2002 ರ ಆರ್ಥಿಕ ಪ್ರತ್ಯಾ ಯೋಜನೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮಗಳು 2000 ಗಳ ಪ್ರಕಾರ ಅಧಿಕಾರ ಪ್ರತ್ಯಾಯೋಜನೆ ಅನುಸರಿಸಿ ಆಯಾ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. |
| | 2 | ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959 ಮತ್ತು ನಿಯಮಗಳು 1960 ರ ಪ್ರಕಾರ ಅಧಿಕಾರಿಗಳು ನಿರ್ವಹಿಸುವ ಕಾರ್ಯವಿವರಗಳು ಈ ಕೆಳಗಿನಂತಿವೆ. |

| II | | ಕರ್ತವ್ಯಗಳು: |
|---|---|---|

**ಆಯುಕ್ತರು ಮತ್ತು ನಿರ್ದೇಶಕರು**

ಆಯುಕ್ತರು ಹಾಗೂ ನಿರ್ದೇಶಕರು ರೇಷ್ಮೆ ಇಲಾಖೆಯ ಮುಖ್ಯಸ್ಥರಾಗಿದ್ದು ಎಲ್ಲಾ ತಾಂತ್ರಿಕ ಮತ್ತು ಆಡಳಿತಾತ್ಮಕ ಕೆಲಸ ಕಾರ್ಯಗಳು ಅವರ ನಿರ್ದೇಶನದಲ್ಲಿ ನಡೆಯುತ್ತವೆ. ಆಯುಕ್ತರು ಇಲಾಖೆಯ 'ಸಿ' ಮತ್ತು 'ಡಿ' ದರ್ಜೆಯ ಸಿಬ್ಬಂದಿಯ ನೇಮಕಾತಿ ಪ್ರಾಧಿಕಾರಿ ಕೂಡಾ ಆಗಿರುತ್ತಾರೆ ಹಾಗೂ ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಹಾಗೂ ರೇಷ್ಮೆ ನೂಲು (ಉತ್ಪಾದನೆ ಮತ್ತು ಸರಬರಾಜು, ವಿತರಣೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ 1959ರ ಕೆಳಗೆ ಅಪೀಲು ಪ್ರಾಧಿಕಾರಿಯಾಗಿರುತ್ತಾರೆ ಹಾಗೂ ಆಯುಕ್ತರು ರೇಷ್ಮೆಗೆ ಸಂಬಂಧಿಸಿದ ಮಂಡಳಿ/ನಿಗಮಗಳ ಸದಸ್ಯರು/ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಾರೆ.

**ಜಂಟಿ ನಿರ್ದೇಶಕರು (ಆಡಳಿತ)**

ಇಲಾಖೆಯ ಸಿಬ್ಬಂದಿ ಮತ್ತು ಆಡಳಿತ ವಿಷಯಗಳಿಗೆ ಸಂಬಂಧಿಸಿದಂತೆ ಆಯುಕ್ತರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸುವುದು. ಅಧಿಕಾರಿ/ನೌಕರರ ಸೇವಾ ವಿಷಯದ ಬಗ್ಗೆ ಪರಿಶೀಲನೆ/ನಿರ್ವಹಣೆ. ನ್ಯಾಯಾಲಯ ಪ್ರಕರಣ, ಅಧಿಕಾರಿ/ನೌಕರರ ಕೆಲಸ ಕಾರ್ಯಗಳಲ್ಲಿ ಕರ್ತವ್ಯಲೋಪ, ಹಣಕಾಸಿನ ದುರುಪಯೋಗಳ ಬಗೆಗಿನ ಆರೋಪಗಳ ತನಿಖೆಯ ವಿಷಯಗಳ ನಿರ್ವಹಣೆ. ಲೇಖನ ಸಾಮಗ್ರಿ/ವಾಹನ/ದೂರವಾಣಿಗಳಿಗೆ ಸಂಬಂಧಿಸಿದ ವಿಷಯಗಳ ನಿರ್ವಹಣೆ. ಭ್ರಷ್ಟಾಚಾರ ನಿಗ್ರಹದಳಕ್ಕೆ ಮುಖ್ಯ ಜಾಗೃತ ಅಧಿಕಾರಿಯಾಗಿ (Vigilance officer) ಕರ್ತವ್ಯ ನಿರ್ವಹಣೆ.

**ರೇಷ್ಮೆ ಅಪರ ನಿರ್ದೇಶಕರು (ತಾಂತ್ರಿಕ)**

ರೇಷ್ಮೆ ಅಪರ ನಿರ್ದೇಶಕರು ತಾಂತ್ರಿಕ ವರ್ಗದ ಅಧಿಕಾರಿಯಾಗಿದ್ದು, ರೇಷ್ಮೆ ಕೃಷಿ ಅಭಿವೃದ್ಧಿ ಕುರಿತು ತಾಂತ್ರಿಕ ವಿಷಯದಲ್ಲಿ ಆಯುಕ್ತರಿಗೆ ಸಲಹೆ ನೀಡುತ್ತಾರೆ ಮತ್ತು ಇಲಾಖೆಯ ತಾಂತ್ರಿಕ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಮಾರ್ಗದರ್ಶನ ನೀಡುತ್ತಾರೆ. ರಾಜ್ಯದಲ್ಲಿ ರೇಷ್ಮೆ ಬೆಳೆ ಅಭಿವೃದ್ಧಿ ಯೋಜನೆಗಳ ತಯಾರಿಕೆ ಹಾಗೂ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ.

**ರೇಷ್ಮೆ ಜಂಟಿ ನಿರ್ದೇಶಕರು**

| | | |
|---|---|---|
| 1 | ವಿಭಾಗೀಯ | ತಮ್ಮ ವ್ಯಾಪ್ತಿಯ ಜಿಲ್ಲೆಗಳಲ್ಲಿ ರೇಷ್ಮೆ ಕೃಷಿಗೆ ಸಂಬಂಧಿಸಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು, ಅಧೀನ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮಾರ್ಗದರ್ಶನ, ಹೊಸ ತಾಂತ್ರಿಕತೆಗಳ ತಂತ್ರಜ್ಞಾನ, ಇಲಾಖೆಯಿಂದ ಲಭ್ಯವಾಗುವ ಸಹಾಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವುದು. ಲೋಪದೋಷಗಳು ಕಂಡು ಬಂದಲ್ಲಿ ಸುಧಾರಿಸುವುದು, ವ್ಯಾಪ್ತಿ ಮೀರಿದ ಪ್ರಕರಣಗಳನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರುವುದು ಸುಧಾರಣಾ ಕ್ರಮ ಅನುಸರಿಸುವುದು. ವಿಭಾಗದ ಎಲ್ಲಾ ಸಂಸ್ಥೆಗಳ ಮತ್ತು ಕಛೇರಿಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿ ನಡೆಸುವುದು. |
| 2 | ಬಿತ್ತನೆ ಪ್ರದೇಶ | ಶುದ್ಧ ಮೈಸೂರು ತಳಿ ಮೂಲ ಬಿತ್ತನೆಯನ್ನು ವಿವಿಧ ಹಂತಗಳಲ್ಲಿ ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸುವುದು. ವಾರ್ಷಿಕ ಬಿತ್ತನೆ ಗೂಡುಗಳ ಬೇಡಿಕೆಯನ್ವಯ ಬಿತ್ತನೆ ಗೂಡುಗಳ ಉತ್ಪಾದನೆಗೆ ಕ್ರಿಯಾಯೋಜನೆ ರೂಪಿಸುವುದು. ರೋಗ ರಹಿತ ಮೊಟ್ಟೆಗಳ / ಬಿತ್ತನೆ ಗೂಡುಗಳ ಉತ್ಪಾದನೆ ಮತ್ತು ವಿತರಣೆಗೆ ಕ್ರಮ ಕೈಗೊಳ್ಳುವುದು,ಬಿತ್ತನೆ ಬೆಳೆಗಾರರಿಗೆ ಬೇಕಾಗಬಹುದಾದ ಸಹಾಯ ಸೌಲಭ್ಯಗಳನ್ನು ಒದಗಿಸುವುದು ರೋಗ ನಿಯಂತ್ರಣ ಕ್ರಮ ಕೈಗೊಳ್ಳುವುದು, ಬೋನಸ್ ಪ್ರೋತ್ಸಾಹಧನ ಹಾಗೂ ಬಿತ್ತನೆ ಗೂಡು ಖರೀದಿ ಬಾಬ್ತು ಪಾವತಿಗೆ ಕ್ರಮ ಕೈಗೊಳ್ಳುವುದು. |
| 3 | ರೇಷ್ಮೆ ವಿನಿಮಯ ಕೇಂದ್ರ | ಕರ್ನಾಟಕ ರೇಷ್ಮೆ ಹುಳುವಿನ ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ಮಾರಾಟ ನಿಯಂತ್ರಣ) ಕಾಯಿದೆ ಮತ್ತು ನಿಯಮಗಳ ಅನ್ವಯ ರೇಷ್ಮೆ ನೂಲಿನ ಪಾರದರ್ಶಕ ಹಾಗೂ ನ್ಯಾಯಯುತ ವಹಿವಾಟಿಗೆ ವ್ಯವಸ್ಥೆ ಮಾಡುವುದು. ಬೆಲೆ ಸ್ಥಿರೀಕರಣ ನಿಧಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವುದು. ಅಧೀನ ಸಂಸ್ಥೆಗಳ ತಪಾಸಣೆ ಉಸ್ತುವಾರಿ ಮತ್ತು ಮೇಲ್ವಿಚಾರಣೆ ನಡೆಸುವುದು. |
| 4 | ಕೇಂದ್ರ ಕಛೇರಿ | ಇಲಾಖೆಯ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅವುಗಳ ಅನುಷ್ಠಾನಕ್ಕೆ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ತಿಳುವಳಿಕೆ ನೀಡುವುದು. ರೇಷ್ಮೆ ಅಪರ ನಿರ್ದೇಶಕರು, ಅಭಿವೃದ್ಧಿ ಆಯುಕ್ತರ ನಿರ್ದೇಶನದಂತೆ ಇಲಾಖೆಯ ಸಂಸ್ಥೆಗಳ ಮೇಲ್ವಿಚಾರಣೆ,ಪರಿಶೀಲನೆಗಳೊಂದಿಗೆ ಸಮನ್ವಯ ಪಡೆದು ಇಲಾಖೆಯ ಕಾರ್ಯಕ್ರಮ ಗಳ ಯಶಸ್ವೀ ಅನುಷ್ಠಾನಗೊಳಿಸುವುದು. ವಿಧಾನ : ಮಾಹಿತಿ ತಯಾರಿಸುವುದು. |